INADEQUATE SUPPLY OF MEDICINES TO RURAL HEALTH DISPENSARIES

308 SRI ANDANAIAH (Kunigal).—

Will the Minister for Health be pelased to state:—

(*a*) Whether it has come to the notice of the Government that the supply of medicine to the Rural Health Dispensaries is inadequate.

(*b*) if so, the steps taken to increase the supply of medicine to the rural Health dispensaries in order to provide free medical aid to the patients of rural areas ?

SRI H. SIDDAVEERAPPA (Minister for Health)'—

(*a*) Yes

(*b*) The provision for supply of drugs and medicines upto Taluk level hospitals has since been increased. Increased provision for the purchase of drugs and medicines for the rural hospitals being made to the extent possible during the current year.

ಶ್ರೀ ಆಂದಾನಯ್ಯ:—(ಬಿ)ಗೆ ಉತ್ತರವಾಗಿ ಔಷಧಿಗಳನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದೀರಿ, ಗ್ರಾಮಾಂತರ ಪ್ರದೇಶಗಳಿಗೆ ಹಿಂದೆ ಕೊಡುತ್ತಿದ್ದುದಕ್ಕಿಂತ ಈಗ ಎಷ್ಟು ಹೆಚ್ಚು ಮಾಡಿದ್ದೀರಿ ?

ಶ್ರೀ ಹೆಚ್. ಸಿದ್ಧವೀರಪ್ಪ:—ಹಿಂದೆ ಇದ್ದ ಬಡ್ಜೆಟ್ಟಿನಲ್ಲಿ ಎಂದರೆ ೧೯೭೨-೭೩ನೇ ಸಾಲಿನಲ್ಲಿ ೨೩೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ಸಾಲಿನಲ್ಲಿ ಬಡ್ಜೆಟ್ಟು ಬಾಬಿನಲ್ಲಿ ೨೮೯.೫೫ ಲಕ್ಷ ರೂಪಾಯಿಗಳನ್ನು ಆಸ್ಪತ್ರೆಗಳ ಮೇಂಟಿನೆನ್ಸುಗಳ ಬಾಬಿಗೆ ಎಂದು ಒದಗಿಸಲಾಗಿದೆ.

ಶ್ರೀ ಆಂದಾನಯ್ಯ.—ಇಷ್ಟು ಇದ್ದರೂ ತಮಗೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧಿಗಳನ್ನು ಕೊಡುತ್ತಿರುವುದು ಸಾಲದು ಎಂದು ದೂರುಗಳು ಬಂದಿರಲಿಲ್ಲವೇ? ಇದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಏನಾದರೂ ಇದುವರೆಗೆ ತೆಗೆದುಕೊಂಡಿದ್ದೀರಾ?

ಶ್ರೀ ಹೆಚ್. ಸಿದ್ಧವೀರಪ್ಪ —ಹಿಂದೆ ಔಷಧಿಗಳು ದುರುಪಯೋಗವಾಗುತ್ತಿದ್ದವು ಎಂದು ದೂರುಗಳು ಬಂದವು. ಇದಕ್ಕಾಗಿ ಎಲ್ಲ ಕಡೆಗಳಲ್ಲಿರುವ ಆಸ್ಪತ್ರೆಗಳಿಗೆ ಸಾಕಷ್ಟು ಔಷಧಿಗಳನ್ನು ಸಪ್ಲೈ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಆದರೂ ಇದು ಸಮರ್ಪಕವಾಗಿ ಮಾಡಲು ಇನ್ನೂ ಆಗಲಿಲ್ಲ ಎಂದು ತಮಗೆ ಅರಿಕೆ ಮಾಡುತ್ತೇನೆ. ಇದರ ಎಲ್ಲ ವಿವರಗಳ ಬಗ್ಗೆ ನಾನು ಈ ಸಭೆಯಲ್ಲಿ ಒಂದು ಸ್ಟೇಟುಮೆಂಟನ್ನು ಶೀಘ್ರದಲ್ಲೇ ಮಾಡುತ್ತೇನೆ ಆಗ ತಮಗೆ ಎಲ್ಲ ವಿವರಗಳು ಯಾವ ಯಾವ ಡಿಸ್ಟ್ರಿಕ್ಟ್‌ಗೆ ಎಷ್ಟೆಷ್ಟು ಸಪ್ಲೈ ಮಾಡಲಾಗಿದೆ ಮತ್ತು ಎಷ್ಟು ಡಿಸ್ಟ್ರಿಬ್ಯೂಟು ಮಾಡಲಾಗಿದೆ ಎನ್ನುವುದು ಗೊತ್ತಾಗುತ್ತದೆ.

COMBINED DISPENSARY AT HULIYAR

32 SRI N. BASAVAIAH (Chikkanayakanahally).—

Will the Minister for Health be pleased to state.—

(*a*) whether the Government has received any representation from the public and the Chikkanayakanahalli Taluk Board, Tumkur District for sanction of a combined dispensary at Huliyar.

(*b*) if so, the action taken in this respect ?

SRI H. SIDDAVEERAPPA, (Minister for Health).—

(*a*) Yes.

(*b*) After the receipt of the representation. the T.D.B Chikkanayakanahalli has been addressed in the matter for payment of its share of recurring and non-recurring expenditure on additional facilities. The T.D.B. Chikkanayakanahalli has resolved in its resolution dated 18th May 1972 agreeing to meet half the expenditure by TDB and half the expenditure by Village Panchayat, Huliyar. Huliyar V. P. will meet the entire cost buildings. The report of the District Health and F P. Officer, Tumkur, as to the existing facilities is awaited On receipt of this information the matter will be examined and necessary action will be taken.

ಶ್ರೀ ಎನ್. ಬಸವಯ್ಯ —ತಾಲ್ಲೂಕು ಬೋರ್ಡಿನವರು ರೆಸಲ್ಯೂಷನ್ ಮಾಡಿ ಕಳುಹಿಸಿ ಮೂರು ತಿಂಗಳಾದರೂ ಇದರ ಬಗ್ಗೆ ಏನೂ ತಿಳಿಯುಲಿಲ್ಲ. ಇಲ್ಲಿನ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಮತ್ತು ಹೋಬಳಿ ಹೆಡಕ್ವಾರ್ಟರಾಗಿರುವುದರಿಂದ ಆದಷ್ಟು ಬೇಗ ಇಲ್ಲಿಗೆ ಒಂದು ಡಿಸ್‌ಪೆನ್‌ಸರಿಯನ್ನು ಮಂಜೂರು ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್. ಸಿದ್ದವೀರಪ್ಪ.—ಮಾಡೋಣ. ಇದರ ಜೊತೆಗೆ ವರ್ಲ್ಡ್ ಹೆಲ್ತ್ ಸ್ಕೀಂನಲ್ಲಿ ನಿಮ್ಮ ಜಿಲ್ಲೆಯೂ ಬರುತ್ತಿರುವುದರಿಂದ ಅದರ ಮೂಲಕ ನಿಮ್ಮ ಭಾಗಕ್ಕೆ ಸಾಕಷ್ಟು ಪರಿಹಾರ ಸಿಗಬಹುದು. ಇದನ್ನು ನೋಡಿಸಿ ಅನುಕೂಲ ಮಾಡಿಕೊಡಬಹುದು. ಇದರಲ್ಲಿ ಹೇಳಿರುವಂತೆ ಇನ್ನೂ ತಾಲ್ಲೂಕು ಬೊರ್ಡು ಹಾಗೂ ಮುನಿಸಿಪಾಲಿಟಿಯವರ ವರದಿ ಬಂದಿರಲಿಲ್ಲ. ಈಚೆಗೆ ಬಂದಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದರಿಂದ ಇದರ ಬಗ್ಗೆ ವಿಚಾರ ಮಾಡುವುದಕ್ಕೆ ಮತ್ತು ಆದಷ್ಟು ಬೇಗ ತಕ್ಕ ಕ್ರಮ ತೆಗೆದುಕೊಳ್ಳಲು ನಮ್ಮ ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ವರ್ಲ್ಡ್ ಬ್ಯಾಂಕು ಮೂಲಕ ಸರಕಾರಕ್ಕೆ ಸಹಾಯ ಬರುತ್ತದೆ ಎಂದರು. ಇದರಲ್ಲಿ ಯಾವ ಯಾವ ಜಿಲ್ಲೆಗಳಿಗೆ ಬರುತ್ತದೆ ಮತ್ತು ಯಾವ ತಾಲ್ಲೂಕುಗಳಿಗೆ ಬರುತ್ತೆ, ಅದನ್ನು ನೋಡಿ ಬೇಗ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್ ಸಿದ್ದವೀರಪ್ಪ —ಈ ಯೋಜನೆ ಪ್ರಕಾರ ಐದು ಜಿಲ್ಲೆಗಳಿಗೆ ಇದು ಅನ್ವಯವಾಗುತ್ತದೆ. ಯಾವ ಯಾವ ಕಡೆ ಯಾವ ಯಾವ ಕಾರ್ಯಕ್ರಮ ತೆಗೆಳುಕೊಳ್ಳಬೇಕು ಅದನ್ನು ಅಲ್ಲಿರುವ ಮುನಿಸಿಪಲ್ ಕೌನ್ಸಿಲ್‌ನವರು ಶಿಫಾರಸು ಮಾಡಿಡುತ್ತಾರೆ. ಅದನ್ನು ನೋಡಿ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ಕ್ಷೇತ್ರವಾದ ಶಿಕಾರಿಪುರಕ್ಕೆ ಹೆಚ್ಚಿನ ಸಹಾಯ ಸಿಗುತ್ತದೆ ಎನ್ನುವುದನ್ನು ತಮಗೆ ಆಂಕೆಗಳನ್ನು ಕೊಟ್ಟು ಆ ಮೇಲೆ ಬೇಕಾದರೆ ತೋರಿಸುತ್ತೇನೆ.

ಅಧ್ಯಕ್ಷರು:—ಪ್ರಶ್ನೋತ್ತರಗಳು ಮುಂಗಿದವು.

QUESTION FOR ANSWERS ON THE DAY (BUT NOT TEKEN UP)
SLUM CLEARANCE SCHEME IN GULBARGA CITY

320. SO SRI MALLIKARJUN KHARGE (Gurmitkal).—

Will the Minister for Municipal Administration be pleased to state.—

(*a*) the total amount sanctioned for slum clearance scheme in Gulbarga City for the year 1973–74;

(*b*) the steps taken to clear these slums at an early date and also to release the entire amount sanctioned for the slum clearance ?